# ಅಂತರರಾಷ್ಟ್ರೀಯ ವಾಣಿಜ್ಯ ಮೇಳ ಸಾವಯವ ಮತ್ತು ಸಿರಿಧಾನ್ಯ – 2025

## ಜನವರಿ 23, 24 ಹಾಗೂ 25, 2025

## ತ್ರಿಪುರವಾಸಿನಿ, ಅರಮನೆ ಮೈದಾನ, ಬೆಂಗಳೂರು

ಸಾವಯವ ಮತ್ತು ಸಿರಿಧಾನ್ಯ ಅಂತರರಾಷ್ಟ್ರೀಯ ವಾಣಿಜ್ಯ ಮೇಳದ ಆರನೇ ಆವೃತ್ತಿಯನ್ನು ಕರ್ನಾಟಕ ಸರ್ಕಾರದ ಕೃಷಿ ಇಲಾಖೆಯಿಂದ ಆಯೋಜಿಸಲಾಗಿದೆ. ಈ ಮೇಳವು ರೈತರು, ರೈತ ಗುಂಪುಗಳು, ದೇಶೀಯ ಮತ್ತು ಅಂತರರಾಷ್ಟ್ರೀಯ ಕಂಪನಿಗಳು, ಸಾವಯವ ಮತ್ತು ಸಿರಿಧಾನ್ಯ ವಲಯದ ಕೇಂದ್ರ ಮತ್ತು ರಾಜ್ಯ ಸಂಸ್ಥೆಗಳನ್ನು ಒಗ್ಗೂಡಿಸುವುದರ ಜೊತೆಗೆ ಹೊಸ ಅವಕಾಶಗಳನ್ನು ಅನ್ವೇಷಿಸುವ ಮತ್ತು ಪರಿಣಾಮಕಾರಿಯಾಗಿ ಮಾರುಕಟ್ಟೆ ಸಂಪರ್ಕಗಳನ್ನು **(forward and backward linkages)** ಕಲ್ಪಿಸುವ ವೇದಿಕೆಯಾಗಿದೆ.

ಕರ್ನಾಟಕ ಸರ್ಕಾರವು 2017 ರಲ್ಲಿ ಆಯೋಜಿಸಿದ ಮೊದಲ ಆವೃತ್ತಿಯ ಸಾವಯವ ಮತ್ತು ಸಿರಿಧಾನ್ಯ ವಾಣಿಜ್ಯ ಮೇಳದ ಮೂಲಕ ರಾಜ್ಯವು ಸಾವಯವ ಮತ್ತು ಸಿರಿಧಾನ್ಯಗಳ ಪ್ರಚಾರದಲ್ಲಿ ದೇಶದಲ್ಲಿಯೇ ಮುಂಚೂಣಿಯಲ್ಲಿರುತ್ತದೆ. ತದನಂತರ ಎರಡನೇ, ಮೂರನೇ, ನಾಲ್ಕನೇ ಮತ್ತು ಐದನೇ ಆವೃತ್ತಿಗಳನ್ನು ಕ್ರಮವಾಗಿ 2018, 2019, 2023 ಮತ್ತು 2024 ರಲ್ಲಿ ಯಶಸ್ವಿಯಾಗಿ ಆಯೋಜಿಸಲಾಗಿರುತ್ತದೆ.

### ಈ ಮೇಳಗಳು ಸಾವಯವ ಮತ್ತು ಸಿರಿಧಾನ್ಯಗಳನ್ನು ಜನಪ್ರಿಯಗೊಳಿಸುವುದರ ಜೊತೆಗೆ ಈ ಕೆಳಗಿನ ಉದ್ದೇಶಗಳನ್ನು ಸಾಧಿಸುವಲ್ಲಿ ಗಮನಾರ್ಹ ಮೈಲುಗಲ್ಲುಗಳಾಗಿ ಪರಿಣಮಿಸಿವೆ:

- ರೈತರಿಗೆ ಒಳ್ಳೆಯದು – ಆಹಾರ, ಮೇವು, ಇಂಧನವಾಗಿ ಬಹು ಉಪಯೋಗ ಮತ್ತು ಬರಗಾಲದಲ್ಲಿ ರೈತರಿಗೆ ಉತ್ತಮ ಪರ್ಯಾಯ ನಿರ್ವಹಣಾ ತಂತ್ರ.
- ಗ್ರಾಹಕರಿಗೆ ಒಳ್ಳೆಯದು – ಪೌಷ್ಟಿಕಾಂಶ ಮತ್ತು ಆರೋಗ್ಯ ಸಮಸ್ಯೆಗಳ ನಿವಾರಣೆ (ಕಬ್ಬಿಣ, ಸತು, ಫೋಲಿಕ್ ಆಮ್ಲ, ಕ್ಯಾಲ್ಸಿಯಂ ಕೊರತೆ ನೀಗಿಸಲು ಮತ್ತು ಮಧುಮೇಹ ನಿಯಂತ್ರಣ)
- ಪರಿಸರಕ್ಕೆ ಒಳ್ಳೆಯದು – ಕಡಿಮೆ ನೀರಿನ ಅವಶ್ಯಕತೆ ಹೊಂದಿರುತ್ತದೆ. ಅತ್ಯಂತ ಶುಷ್ಕ ವಾತಾವರಣದಲ್ಲಿ ಬದುಕಬಲ್ಲವು. ಹವಾಮಾನ ಬದಲಾವಣೆಗೆ ಹೊಂದಿಕೊಳ್ಳುತ್ತವೆ.

### ಮೇಳದ ಮುಖ್ಯಾಂಶಗಳು

- 300+ ಹವಾನಿಯಂತ್ರಿತ ಮಳಿಗೆಗಳು
- ಸಾವಯವ ಮತ್ತು ಸಿರಿಧಾನ್ಯಗಳ ಪ್ರತ್ಯೇಕ ಮಳಿಗೆಗಳು
- ಅಂತರರಾಷ್ಟ್ರೀಯ ವಸ್ತು ಪ್ರದರ್ಶನ ಹಾಗೂ ಸಮ್ಮೇಳನ
- ದೇಸಿ ತಳಿಗಳ ಪೆವಿಲಿಯನ್
- ಮಣ್ಣಿನ ಪೆಡಾನ್ ಪೆವಿಲಿಯನ್
- ಉತ್ಪಾದಕರು ಮತ್ತು ಗ್ರಾಹಕರ ಸಭೆ(ಬಿ2ಸಿ)
- ಉತ್ಪಾದಕರು ಮತ್ತು ಮಾರುಕಟ್ಟೆದಾರರ ಸಭೆ(ಬಿ2ಬಿ)
- ಅಂತರರಾಷ್ಟ್ರೀಯ ಸಮ್ಮೇಳನ
- ರೈತರ ಕಾರ್ಯಾಗಾರ
- ಸಾವಯವ, ಸಿರಿಧಾನ್ಯ ಮತ್ತು ಮರೆತುಹೋದ ಖಾದ್ಯಗಳ ಆಹಾರ ಮಳಿಗೆಗಳು
- ಸಾಂಸ್ಕೃತಿಕ ಕಾರ್ಯಕ್ರಮಗಳು

ಅಂತರರಾಷ್ಟ್ರೀಯ ವಾಣಿಜ್ಯ ಮೇಳ 2025 ಸಾವಯವ ಮತ್ತು ಸಿರಿಧಾನ್ಯ
ಜನವರಿ 23 ರಿಂದ 25, ತ್ರಿಪುರವಾಸಿನಿ
ಅರಮನೆ ಮೈದಾನ, ಬೆಂಗಳೂರು

### ಮೇಳದಲ್ಲಿ ಹೊಸ ಸೇರ್ಪಡೆ

ಪಾರಂಪರಿಕ ಬೆಳೆಗಳ ಸಂರಕ್ಷಣೆ – ತಲೆಮಾರುಗಳಿಂದ ರೈತರು ಆಯ್ಕೆಮಾಡಿ ಬೆಳೆದ ದೇಸಿ ತಳಿಗಳ ಪ್ರದರ್ಶನ. ಸ್ಥಳೀಯ ಅಥವಾ ಸಾಂಪ್ರದಾಯಿಕ ಕೃಷಿ ಪದ್ಧತಿಗಳಿಂದ ಅಭಿವೃದ್ಧಿಪಡಿಸಿ ನಿರ್ವಹಿಸಲ್ಪಟ್ಟ ಈ ತಳಿಗಳನ್ನು ಸಾಂಪ್ರದಾಯಿಕ, ಪಾರಂಪರಿಕ, ಜಾನಪದ ಅಥವಾ ದೇಸಿ ಪ್ರಭೇದಗಳೆಂದು ವಿವಿಧ ರೀತಿಯಲ್ಲಿ ಕರೆಯಲಾಗುತ್ತದೆ.

ಸುಸ್ಥಿರ ಕೃಷಿಗಾಗಿ ಮಣ್ಣಿನ ಸಂರಕ್ಷಣೆ – ಸಸ್ಯಗಳ ಬೆಳವಣಿಗೆಗೆ ಮಣ್ಣು ಪ್ರಮುಖ ಆಧಾರವಾಗಿರುವುದರಿಂದ, ರೈತರು, ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳಲ್ಲಿ ಮಣ್ಣಿನ ಮಹತ್ವ, ಗುಣಲಕ್ಷಣಗಳು, ವರ್ಗೀಕರಣ ಮತ್ತು ರಚನೆಯ ಕುರಿತು ಅರಿವು ಮೂಡಿಸುವುದು ಅತ್ಯಾವಶ್ಯವಾಗಿದೆ. ಈ ಉದ್ದೇಶದಿಂದ, ಮಣ್ಣಿನ ಪೆಡಾನ್ ಪೆವಿಲಿಯನ್ ಅನ್ನು ಸಾವಯವ ಮತ್ತು ಸಿರಿಧಾನ್ಯಗಳ ಅಂತರರಾಷ್ಟ್ರೀಯ ವಾಣಿಜ್ಯ ಮೇಳ – 2025 ರಲ್ಲಿ ಪರಿಚಯಿಸಲಾಗಿದೆ.

**ಸಾವಯವ ಮತ್ತು ಸಿರಿಧಾನ್ಯಗಳನ್ನು 'ಭವಿಷ್ಯದ ಪೀಳಿಗೆಯನ್ನು ಪೋಷಿಸುವ ಸಾಂಪ್ರದಾಯಿಕ ಪ್ರಜ್ಞಾವಂತ ಆಹಾರ' ಎಂದು ಜನಪ್ರಿಯಗೊಳಿಸುವುದು ಮತ್ತು ಭವಿಷ್ಯಕ್ಕಾಗಿ ಪಾರಂಪರಿಕ ದೇಸಿ ತಳಿಗಳನ್ನು ಬೆಳೆಸಿ ಸಂರಕ್ಷಿಸುವುದು ರಾಜ್ಯ ಸರ್ಕಾರದ ಧ್ಯೇಯೋದ್ದೇಶವಾಗಿದೆ.**

# ಅಂತರರಾಷ್ಟ್ರೀಯ ವಾಣಿಜ್ಯ ಮೇಳ ಸಾವಯವ ಮತ್ತು ಸಿರಿಧಾನ್ಯ–2025ರ ವೇಳಾಪಟ್ಟಿ

## ದಿನ 1– ಗುರುವಾರ, 23ನೇ ಜನವರಿ 2025

| ಕ್ರ.ಸಂ | ಕಾರ್ಯಕ್ರಮ | ಸಮಯ |
|---|---|---|
| i | ಅಂತರರಾಷ್ಟ್ರೀಯ ವಾಣಿಜ್ಯ ಮೇಳ 2025ರ ಉದ್ಘಾಟನಾ ಕಾರ್ಯಕ್ರಮ – ಕರ್ನಾಟಕದ ಸನ್ಮಾನ್ಯ ಮುಖ್ಯಮಂತ್ರಿಗಳಿಂದ ಮುಖ್ಯ ಸಭಾಂಗಣದಲ್ಲಿ | 10.00 AM - 11.30 AM |
| ii | ವಸ್ತು ಪ್ರದರ್ಶನ– ಮಳಿಗೆಗಳ ಉದ್ಘಾಟನೆ & ಪ್ರದರ್ಶನ | 11.30 AM - 7.00 PM |
| iii | ಅಂತರರಾಷ್ಟ್ರೀಯ ಸಮ್ಮೇಳನ– ನೋಂದಣಿ & ಸಮ್ಮೇಳನ ಉದ್ಘಾಟನೆ | 12.00 PM -1.00 PM |
| | ಅಧಿವೇಶನ 1 | 2.00 PM - 6.00 PM |
| iv | ಮುಖ್ಯ ಸಭಾಂಗಣದಲ್ಲಿ ರೈತರ ಕಾರ್ಯಾಗಾರ – ಅಧಿವೇಶನಗಳು | 2.00 PM - 5.00 PM |
| v | ಬಿ2ಬಿ ಲಾಂಜ್ ನಲ್ಲಿ ಬಿ2ಬಿ ಮತ್ತು ಎಫ್2ಬಿ ಅಧಿವೇಶನಗಳು – ಉದ್ಘಾಟನೆ ಅಧಿವೇಶನಗಳು | 12.30 PM - 1.00 PM |
| | | 2.00 PM - 6.00 PM |
| vi | ಸಾಂಸ್ಕೃತಿಕ ಕಾರ್ಯಕ್ರಮಗಳು | 6.00 PM - 8.00 PM |

## ದಿನ 2– ಶುಕ್ರವಾರ, 24ನೇ ಜನವರಿ 2025

| ಕ್ರ.ಸಂ | ಕಾರ್ಯಕ್ರಮ | ಸಮಯ |
|---|---|---|
| i | ಪ್ರದರ್ಶನ ಮುಂದುವರಿಯುತ್ತದೆ | 10.00 AM - 11.30 AM |
| ii | ಅಂತರರಾಷ್ಟ್ರೀಯ ಸಮ್ಮೇಳನ — ಅಧಿವೇಶನ 2 | 9.30 AM - 1.00 PM |
| | ಅಧಿವೇಶನ 3 | 2.00 PM - 3.40 PM |
| | ಅಧಿವೇಶನ 4 | 3.40 PM - 6.30 PM |
| iii | ಮುಖ್ಯ ಸಭಾಂಗಣದಲ್ಲಿ ರೈತರ ಕಾರ್ಯಾಗಾರ –ಅಧಿವೇಶನಗಳು 1 | 10.00 AM - 5.00 PM |
| iv | ಬಿ2ಬಿ ಮತ್ತು ಎಫ್2ಬಿ ಅಧಿವೇಶನಗಳು ಮುಂದುವರೆಯುತ್ತದೆ | 10.30 AM - 6.00 PM |
| v | ಸಾಂಸ್ಕೃತಿಕ ಕಾರ್ಯಕ್ರಮಗಳು | 12.30 PM - 1.00 PM |

## ದಿನ 3– ಶನಿವಾರ, 25ನೇ ಜನವರಿ 2025

| ಕ್ರ.ಸಂ | ಕಾರ್ಯಕ್ರಮ | ಸಮಯ |
|---|---|---|
| i | ಪ್ರದರ್ಶನ ಮುಂದುವರಿಯುತ್ತದೆ | 10.00 AM - 11.30 AM |
| ii | ಅಂತರರಾಷ್ಟ್ರೀಯ ಸಮ್ಮೇಳನ – ಅಧಿವೇಶನ 5 | 9.30 AM - 12.00 PM |
| | ಸಮಾರೋಪ ಕಾರ್ಯಕ್ರಮ | 12.00 PM - 1.00 PM |
| iii | ಮುಖ್ಯ ಸಭಾಂಗಣದಲ್ಲಿ ರೈತರ ಕಾರ್ಯಾಗಾರ | 10.00 AM - 1.00 PM |
| iv | ಬಿ2ಬಿ ಮತ್ತು ಎಫ್2ಬಿ ಅಧಿವೇಶನಗಳು | 10.00 AM - 3.00 PM |
| v | ಸಮಾರೋಪ ಸಮಾರಂಭ– ಮುಖ್ಯ ಸಭಾಂಗಣ | 4.00 PM -5.30 PM |

## ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ


ಸಾವಯವ ಕೃಷಿ ಘಟಕ, ಕರ್ನಾಟಕ ರಾಜ್ಯ ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು–560001

ದೂ ಸಂಖ್ಯೆ: 080–22074111 / 22242746

ಮಿಂಚಂಚೆ: itf2025organiccell@gmail.com

ವಿವರಗಳಿಗಾಗಿ ಸಂಪರ್ಕಿಸಿ : www.organics-millets.in